ಎದುರಿಗೆ ನೋಡಿದಾಗ ಆದ ಸಂತೋಷ, ಪರಮಾನಂದ ಅವರಿಗಾಗಿರಲಿಲ್ಲ. ರೂಪ ಗದ್ಗದಿತಳಾಗಿ ಚಿಕ್ಕಮ್ಮ, ಏಳು ಊಟ ಮಾಡು. ನನ್ನಿಂದ ಇಂದು ದೊಡ್ಡ ತಪ್ಪಾಯಿತು. ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ. ನನ್ನ ಅಪರಾಧವನ್ನು ಕ್ಷಮಿಸುವಂತೆ ದೇವರಲ್ಲಿ ಪ್ರಾರ್ಥಿಸು ಎಂದಳು.

ಮುಗ್ಧ ಮಕ್ಕಳು ಮಿಠಾಯಿ ಸಿಕ್ಕಿದೊಡನೆ ಹೊಡೆತವನ್ನು ಮರೆತು ಬಿಡುವಂತೆ ಮುದಿಚಿಕ್ಕಮ್ಮ ಎಲ್ಲವನ್ನೂ ಮರೆತು ಊಟ ಮಾಡುತ್ತಿದ್ದಳು. ಅವಳ ರೋಮ ರೋಮದಿಂದ ಒಳ್ಳೆಯ ಆಶೀರ್ವಾದ, ಕಾಮನೆಗಳು ಹೊರಹೊಮ್ಮುತ್ತಿರುವಂತೆ ಕಂಡಿತು. ರೂಪ ಈ ದೃಶ್ಯವನ್ನು ನೋಡುತ್ತಾ ಸ್ವರ್ಗದ ಆನಂದವನ್ನು ಅನುಭವಿಸುವುದರಲ್ಲಿ ಮಗ್ನಳಾಗಿದ್ದಳು.

### ಪ್ರೇಮ್‌ಚಂದ್ (1880– 1936)

ಹಿಂದಿ ಸಾಹಿತ್ಯದ ಪ್ರಸಿದ್ಧ ಲೇಖಕ ಪ್ರೇಮ್‌ಚಂದ್, 'ಕಹಾನಿ ಸಾಮ್ರಾಟ್' ಎಂದೇ ಪ್ರಸಿದ್ಧರಾದ ಕತೆಗಾರರು. ಅವರು ಹುಟ್ಟಿದ್ದು ವಾರಣಾಸಿ ಹತ್ತಿರದ ಗ್ರಾಮವೊಂದರಲ್ಲಿ.
ಹಿಂದಿ ಮತ್ತು ಉರ್ದು ಭಾಷೆಗಳಲ್ಲಿ ಅನೇಕ ಕತೆ, ಕಾದಂಬರಿಗಳನ್ನು ಬರೆದಿದ್ದಾರೆ.
ಮಹಿಳೆಯರು ಮತ್ತು ದಲಿತರ ಶೋಷಣೆ, ವರದಕ್ಷಿಣೆ, ಅಸ್ಪೃಶ್ಯತೆ, ಮೂಢನಂಬಿಕೆಗಳಂತಹ ಸಾಮಾಜಿಕ ಪಿಡುಗುಗಳು, ಸ್ವಾತಂತ್ರ್ಯ ಸಂಗ್ರಾಮ ಅವರ ಕತೆ, ಕಾದಂಬರಿಗಳ ವಸ್ತು.
'ಕರ್ಮಭೂಮಿ', 'ಗೋದಾನ್', 'ಸೇವಾಸದನ್', 'ಗಬನ್', 'ಶತರಂಜ್ ಕೆ ಖಿಲಾಡಿ' ಇವು ಅವರ ಕೆಲವು ಪ್ರಸಿದ್ಧ ಕೃತಿಗಳು. ನೂರಕ್ಕೂ ಹೆಚ್ಚು ಕತೆಗಳನ್ನು ಅವರು ಬರೆದಿದ್ದಾರೆ. ಅವರ ಕೃತಿಗಳು ಬೇರೆ ಭಾಷೆಗಳಿಗೆ ಅನುವಾದಗೊಂಡಿವೆ ಹಾಗೂ 'ಗೋದಾನ್' ಸಿನಿಮಾ ಆಗಿದೆ.

### ಕೆ. ಶಾಂತಾಮಣಿ

ಹಿಂದಿ ಸಾಹಿತ್ಯದಲ್ಲಿ ಎಂ.ಎ. ಪದವಿ ಪಡೆದಿರುವ ಶಾಂತಾಮಣಿ ವಿದ್ಯಾರ್ಥಿ ದೆಸೆಯಿಂದಲೂ ಸಾಹಿತ್ಯ, ಚಿತ್ರಕಲೆಗಳತ್ತ ಒಲವು ಬೆಳೆಸಿಕೊಂಡವರು. ಐದು ಸ್ವತಂತ್ರ ಕನ್ನಡ ಕಾದಂಬರಿಗಳು ಹಾಗೂ ಹಿಂದಿಯ ಪ್ರಸಿದ್ಧ ಕಾದಂಬರಿಕಾರ ಹಿಮಾಂಶು ಜೋಶಿಯವರ ಕಾದಂಬರಿಯ ಕನ್ನಡ ಅನುವಾದ 'ನಿನಗಾಗಿ' ಪ್ರಕಟಗೊಂಡಿವೆ.
ಸ್ವಂತ ಕತೆಗಳೂ ಸೇರಿದಂತೆ ಅನುವಾದಿತ ವಿಜ್ಞಾನ ಲೇಖನಗಳು, ಕತೆಗಳು, ಆಧ್ಯಾತ್ಮಿಕ ಹಾಗೂ ಸಂತರ ಜೀವನಗಳಿಗೆ ಸಂಬಂಧಿಸಿದ ಬರಹಗಳನ್ನು ಕನ್ನಡ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.
ಮಕ್ಕಳಿಗೆಂದು ಬರೆದ ಹಲವು ಕಿರುಹೊತ್ತಿಗೆಗಳು ಪ್ರಕಟವಾಗಿವೆ. ಹಿಂದಿಯಲ್ಲೂ ಅವರು ಕತೆಗಳನ್ನು ಬರೆದು ಪ್ರಕಟಿಸಿದ್ದಾರೆ. ಪ್ರಸ್ತುತ ಮೈಸೂರಿನಲ್ಲಿ ನೆಲೆಸಿದ್ದಾರೆ.